Akashvani: Bangalore
National Bulletin In Kannada
02.04.2026: 13.10hrs
**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

02.04.2026: 13.10hrs
********

**ಮುಖ್ಯಾಂಶಗಳು :**

1. ಪರಿಣಾಮಕಾರಿ ಆಡಳಿತದ ಮಾದರಿ ಜೊತೆಗೆ ಜನಕೇಂದ್ರಿತ ವ್ಯವಸ್ಥೆ ಅಗತ್ಯ - ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದನೆ
2. ವಿದ್ಯುತ್ ಗ್ರಾಹಕರಿಗೆ ಪ್ರಿಪೆಯ್ಡ್ ಸ್ಮಾರ್ಟ್ ಮೀಟರ್ ಅಳವಡಿಕೆ ಕಡ್ಡಾಯವಲ್ಲ - ಸಚಿವ ಮನೋಹರ್ ಲಾಲ್
3. ಪಶ್ಚಿಮ-ಏಷ್ಯಾ ಸಂಘರ್ಷ ; ಪೆಟ್ರೋಕೆಮಿಕಲ್ ಉತ್ಪನ್ನಗಳಿಗೆ ಜೂನ್‌ವರೆಗೆ ಸೀಮಾ ಸುಂಕದಿಂದ ಸಂಪೂರ್ಣ ವಿನಾಯಿತಿಗೆ ಕೇಂದ್ರ ಸರ್ಕಾರ ನಿರ್ಧಾರ
4. ರಕ್ಷಣಾ ಉತ್ಪನ್ನಗಳ ರಫ್ತು ; ೩೮ ಸಾವಿರದ ೪೨೪ ಕೋಟಿ ರೂಪಾಯಿಗಳ ಸಾರ್ವಕಾಲಿಕ ದಾಖಲೆ ಸೃಷ್ಟಿ
5. ಐಪಿಎಲ್ ಟಿ-೨೦ ಕ್ರಿಕೆಟ್ ; ಇಂದು ಕೊಲ್ಕತ್ತಾ ನೈಟ್ ರೈಡರ್ಸ್-ಸನ್ ರೈಸರ್ಸ್ ಹೈದರಾಬಾದ್ ಸೆಣಸು

******

ಭಾರತದ ಆಶೋತ್ತರ ಬೇಡಿಕೆಗಳು ಕ್ಷಿಪ್ರವಾಗಿ ಬದಲಾಗುತ್ತಿದ್ದು, ಅದು ಪರಿಣಾಮಕಾರಿ ಆಡಳಿತದ ಮಾದರಿಯನ್ನು ಮಾತ್ರ ಬಯಸುತ್ತಿಲ್ಲ. ಬದಲಿಗೆ ಆಳವಾದ ಜನಕೇಂದ್ರೀತ ವ್ಯವಸ್ಥೆಯನ್ನು ಬಯಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ. ಅವರು, ಕರ್ಮಯೋಗಿ ಸಾಧನ ಸಪ್ತಾಹ-೨೦೨೬ಅನ್ನು ಉದ್ದೇಶಿಸಿ ಮಾಡಿದ ವಿಡಿಯೋ ಸಂದೇಶದಲ್ಲಿ ಸರ್ಕಾರದ ಆಡಳಿತ ಇಂದು 'ನಾಗರಿಕ ದೇವೋಭವ' ಎಂಬ ಮಂತ್ರದಿಂದ ನಡೆಯುತ್ತಿದ್ದು, ಇದರಲ್ಲಿ ಸಾರ್ವಜನಿಕ ಸೇವೆಗಳನ್ನು ಹೆಚ್ಚು ಸಮರ್ಥ, ಸೂಕ್ಷ್ಮ ಮತ್ತು ಜನಸ್ನೇಹಿಯನ್ನಾಗಿ ಮಾಡಲು ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದರು.

ಸಾಮರ್ಥ್ಯ ವೃದ್ಧಿ ಆಯೋಗ ಮತ್ತು ಮಿಷನ್ ಕರ್ಮಯೋಗಿ ಇವೆರಡು ಪ್ರತಿಯೊಬ್ಬ ಭಾರತೀಯರ ಆಶೋತ್ತರಗಳಿಗೆ ತಕ್ಕಂತೆ ಆಧುನಿಕ, ಕರ್ತವ್ಯ ಬದ್ಧತೆಯುಳ್ಳ ಮತ್ತು ಸ್ಪಂದನಾಶೀಲ ದುಡಿಯುವ ಪಡೆಯನ್ನು ಸೃಷ್ಟಿಸುವ ಪ್ರಮುಖ ಗುರಿಯನ್ನು ಹೊಂದಿವೆ ಎಂದು ಪ್ರಧಾನಿ ಹೇಳಿದರು. ಅಭಿವೃದ್ಧಿ ಹೊಂದಿದ ಭಾರತ ಕೇವಲ ಮೂಲಸೌಕರ್ಯ ಮತ್ತು ತಂತ್ರಜ್ಞಾನಗಳನ್ನು ನಿರ್ಮಿಸುವುದಿಲ್ಲ ಅವುಗಳ ಜೊತೆಗೆ ಕೌಶಲ್ಯ ಹೊಂದಿದ ಮತ್ತು ನಿಷ್ಠೆಯ ಮಾನವ ಸಂಪನ್ಮೂಲವನ್ನು ಸೃಷ್ಟಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಜನರ ಜೀವನ ಸುಗಮಗೊಳಿಸುವುದು ಹಾಗೂ ಅವರು ಗುಣಮಟ್ಟದ ಜೀವನ ಸಾಗಿಸಲು ನೆರವಾಗುವುದು, ಆಡಳಿತದ ಪ್ರಮುಖ ಆದ್ಯತೆಯಾಗಿದೆ ಎಂದು ಪ್ರಧಾನಿ ತಿಳಿಸಿದರು.

******

ಎಲ್ಲ ಗೃಹ ಬಳಕೆ ವಿದ್ಯುತ್ ಗ್ರಾಹಕರಿಗೆ ಪ್ರಿಪೆಯ್ಡ್ ಸ್ಮಾರ್ಟ್ ಮೀಟರ್ ಅಳವಡಿಕೆ ಕಡ್ಡಾಯವಲ್ಲ ಎಂದು ಕೇಂದ್ರ ವಿದ್ಯುತ್ ಸಚಿವ ಮನೋಹರ್ ಲಾಲ್ ಲೋಕಸಭೆಯಲ್ಲಿಂದು ತಿಳಿಸಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ಪೂರಕ ಪ್ರಶ್ನೆಗೆ ಉತ್ತರಿಸಿದ ಅವರು, ಗ್ರಾಹಕರು ಪ್ರಿಪೆಯ್ಡ್ ಸ್ಮಾರ್ಟ್ ಮೀಟರ್ ಅಳವಡಿಕೆ ಆಯ್ಕೆ ಮಾಡಿಕೊಂಡರೆ ಅದು ರಾಜ್ಯಗಳು ಮತ್ತು ವಿದ್ಯುತ್ ವಿತರಣಾ ಕಂಪನಿಗಳಿಗೆ ಅನುಕೂಲವಾಗಲಿದೆ. ಈಗಾಗಲೇ ಹಲವು ರಾಜ್ಯಗಳು ಸ್ಮಾರ್ಟ್ ಮೀಟರ್ ಅಳವಡಿಕೆ ಕಾರ್ಯದಲ್ಲಿ ತೊಡಗಿವೆ ಎಂದು ಅವರು ಹೇಳಿದರು.

ಬಲವಂತವಾಗಿ ಯಾವುದೇ ಗ್ರಾಹಕರಿಗೆ ಪ್ರಿಪೆಯ್ಡ್ ಸ್ಮಾರ್ಟ್ ಮೀಟರ್ ಅಳವಡಿಕೆ ಮಾಡುವಂತಿಲ್ಲ, ಅದು ಗ್ರಾಹಕರ ಆಯ್ಕೆಗೆ ಬಿಟ್ಟ ವಿಚಾರ. ಹಲವೆಡೆ ಸ್ಮಾರ್ಟ್ ಮೀಟರ್ ಅಳವಡಿಕೆ ಮಾಡಲಾಗಿದ್ದು, ಅಂತಹ ಕಡೆ ವಿದ್ಯುತ್ ವಿತರಣಾ ಕಂಪನಿಗಳು ನಷ್ಟದಿಂದ ಹೊರಬಂದು ಲಾಭದತ್ತ ಸಾಗಿದೆ ಎಂದು ಅವರು ಹೇಳಿದರು.

******

ಪಶ್ಚಿಮ-ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದಿಂದಾಗಿ ಜಾಗತಿಕ ಪೂರೈಕೆ ಸರಣಿಯಲ್ಲಿ ನಿರಂತರ ವ್ಯತ್ಯಯವಾಗುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ನಿರ್ಣಾಯಕ ಪೆಟ್ರೋಕೆಮಿಕಲ್ ಉತ್ಪನ್ನಗಳಿಗೆ ೨೦೨೬ರ ಜೂನ್ ೩೦ರವರೆಗೆ ಸೀಮಾ ಸುಂಕದಿಂದ ಸಂಪೂರ್ಣ ವಿನಾಯಿತಿ ನೀಡಲು ನಿರ್ಧರಿಸಿದೆ. ಈ ಕುರಿತು ಪ್ರಕಟಣೆ ಹೊರಡಿಸಿರುವ ಹಣಕಾಸು ಸಚಿವಾಲಯ ದೇಶೀಯ ಕೈಗಾರಿಕೆಗಳಿಗೆ ನಿರ್ಣಾಯಕ ಪೆಟ್ರೋಕೆಮಿಕಲ್ ಉತ್ಪನ್ನಗಳ ಲಭ್ಯತೆಯನ್ನು ಖಾತರಿಪಡಿಸಲು ತಾತ್ಕಾಲಿಕ ಪರಿಹಾರ ಕ್ರಮವಾಗಿ ಈ ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದೆ. ಈ ಕ್ರಮದಿಂದಾಗಿ ದೇಶದಲ್ಲಿ ಪೂರೈಕೆ ಸರಣಿಯಲ್ಲಿ ಸ್ಥಿರತೆ ಕಾಯ್ದುಕೊಳ್ಳುವುದಲ್ಲದೇ ಹಲವು ವಲಯಗಳ ಮೇಲಿನ ವೆಚ್ಚದ ಒತ್ತಡವನ್ನು ತಗ್ಗಿಸುತ್ತದೆ. ಈ ಸುಂಕ ವಿನಾಯಿತಿ ಕ್ರಮದಿಂದ ಪ್ಲಾಸ್ಟಿಕ್, ಪ್ಯಾಕೆಜಿಂಗ್, ಜವಳಿ, ಫಾರ್ಮಸಿಟಿಕಲ್ಸ್, ಕೆಮಿಕಲ್ಸ್, ಆಟೋಮೋಟಿವ್ ಬಿಡಿ ಭಾಗಗಳು ಮತ್ತು ಇತರೆ ಉತ್ಪಾದನಾ ವಲಯಗಳಿಗೆ ಸಹಾಯಕವಾಗಲಿದೆ ಎಂದು ಹಣಕಾಸು ಸಚಿವಾಲಯ ಹೇಳಿದೆ.

******

೨೦೨೫-೨೬ನೇ ಸಾಲಿನ ಹಣಕಾಸು ವರ್ಷದಲ್ಲಿ ರಕ್ಷಣ ಉತ್ಪನ್ನಗಳ ರಫ್ತಿನಲ್ಲಿ ಸಾರ್ವಕಾಲಿಕ ದಾಖಲೆ ಸೃಷ್ಟಿಯಾಗಿದ್ದು, ಒಟ್ಟು ೩೮ ಸಾವಿರದ ೪೨೪ ಕೋಟಿ ರೂಪಾಯಿ ಮೌಲ್ಯದ ಉತ್ಪನ್ನಗಳನ್ನು ರಫ್ತು ಮಾಡಲಾಗಿದೆ. ಕಳೆದ ವರ್ಷ ಈ ಪ್ರಮಾಣ ೨೩ ಸಾವಿರದ ೬೨೨ ಕೋಟಿ ರೂಪಾಯಿ ಇತ್ತು. ಒಟ್ಟು ರಫ್ತು ಪ್ರಮಾಣ ಕಳೆದ ವರ್ಷಕ್ಕೆ ಹೋಲಿಸಿದರೆ ೧೪ ಸಾವಿರದ ೮೦೨ ಕೋಟಿ ರೂಪಾಯಿ ಅಂದರೆ ಶೇಕಡ ೬೨.೨೨ ರಷ್ಟು ಹೆಚ್ಚಾಗಿದೆ. ಈ ಸಾಧನೆಗೆ ರಕ್ಷಣಾ ವಲಯದ ಸಾರ್ವಜನಿಕ ಉದ್ದಿಮೆಗಳು ಮತ್ತು ಖಾಸಗಿ ವಲಯ ಕ್ರಮವಾಗಿ ಶೇಕಡ ೫೪.೮೪ ಮತ್ತು ಶೇಕಡ ೪೫.೧೬ ರಷ್ಟು ಕೊಡುಗೆ ನೀಡಿವೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

******

ಸಂಸತ್ತಿನ ಬಜೆಟ್ ಅಧಿವೇಶನ ಇಂದು ಮುಕ್ತಾಯಗೊಳ್ಳಲಿದೆ. ರಾಜ್ಯಸಭೆಯು ಆಂಧ್ರಪ್ರದೇಶ ಪುನರ್ ವಿಂಗಡಣೆ (ತಿದ್ದುಪಡಿ) ಮಸೂದೆ, ೨೦೨೬ ಅನ್ನು ಇಂದು ಅಂಗೀಕಾರಕ್ಕಾಗಿ ಕೈಗೆತ್ತಿಕೊಳ್ಳುವ ಸಾಧ್ಯತೆಯಿದೆ. ಬಜೆಟ್ ಅಧಿವೇಶನದ ಮೊದಲ ಭಾಗವು ಕಳೆದ ಜನವರಿ ೨೮ ರಂದು ಆರಂಭವಾಗಿ ಫೆಬ್ರವರಿ ೧೩ ರವರೆಗೆ ನಡೆಯಿತು. ಬಜೆಟ್ ಅಧಿವೇಶನದ ಎರಡನೇ ಚರಣವು ಮಾರ್ಚ್ ೮ ರಂದು ಆರಂಭವಾಯಿತು. ಮೊದಲ ಹಂತದಲ್ಲಿ, ರಾಷ್ಟ್ರಪತಿಗಳ ಭಾಷಣಕ್ಕೆ ವಂದನಾ ನಿರ್ಣಯ ಮತ್ತು ೨೦೨೬-೨೭ ರ ಕೇಂದ್ರ ಬಜೆಟ್ ಮೇಲೆ ಚರ್ಚೆ ನಡೆಯಿತು. ಎರಡನೇ ಹಂತದಲ್ಲಿ, ಸಂಸತ್ತು ಹಣಕಾಸು ಮಸೂದೆ ೨೦೨೬ ಮತ್ತು ವಿನಿಯೋಗ ಮಸೂದೆ ೨೦೨೬ ಗೆ ಅನುಮೋದನೆ ನೀಡಿತು. ಅಲ್ಲದೆ, ಪ್ರಧಾನಿ ನರೇಂದ್ರ ಮೋದಿ ಸಂಸತ್ತಿನ ಎರಡೂ ಸದನಗಳನ್ನು ಉದ್ದೇಶಿಸಿ ಮಾತನಾಡಿದರು, ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದಿಂದ ಉದ್ಭವಿಸುವ ಪರಿಸ್ಥಿತಿಯ ಕುರಿತು ಸರ್ಕಾರದ ನಿಲುವನ್ನು ಮಂಡಿಸಿದರು.

******

ಪಶ್ಚಿಮ ಬಂಗಾಳ ವಿಧಾನಸಭೆಯ ೨ನೇ ಹಂತದ ಚುನಾವಣೆಗೆ ಇಂದು ಅಧಿಸೂಚನೆ ಹೊರಬಿದ್ದಿದೆ. ಇದರಿಂದಾಗಿ ಇಂದಿನಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದ್ದು, ಅಭ್ಯರ್ಥಿಗಳು ತಮ್ಮ ಉಮೇದುವಾರಿಕೆ ಸಲ್ಲಿಸಲು ಇದೇ ೯ ಕಡೆಯ ದಿನವಾಗಿದೆ. ನಾಮಪತ್ರಗಳ ಪರಿಶೀಲನೆ ಇದೇ ೧೦ ರಂದು ನಡೆಯಲಿದ್ದು, ನಾಮಪತ್ರಗಳನ್ನು ಹಿಂಪಡೆಯಲು ಇದೇ ೧೩ ಕೊನೆಯ ದಿನವಾಗಿದೆ. ಇದೇ ೨೯ರಂದು ಈ ಹಂತದಲ್ಲಿ ೧೪೨ ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ. ಈ ಮಧ್ಯೆ ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ಪಶ್ಚಿಮ ಬಂಗಾಳದ ಚುನಾವಣಾಧಿಕಾರಿ ರಾಜ್ಯದಲ್ಲಿ ಎಲ್ಲ ಬಗೆಯ ಚುನಾವಣಾ ಸಮೀಕ್ಷೆಗಳನ್ನು ನಿಷೇಧಿಸಿದೆ. ಈ ನಿಷೇಧ ಎಲ್ಲ ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳಿಗೆ ಅನ್ವಯವಾಗಲಿದ್ದು, ಏಪ್ರಿಲ್ ೯ರ ಬೆಳಗ್ಗೆ ೭ ರಿಂದ ಏಪ್ರಿಲ್ ೨೯ರ ಸಂಜೆ ೬.೩೦ರವರೆಗೆ ಈ ನಿಷೇಧ ಜಾರಿಯಲ್ಲಿರಲಿದೆ.

******

ಕೇರಳದಲ್ಲಿ ವಿಧಾನಸಭಾ ಚುನಾವಣಾ ಕಣ ರಂಗೇರಿದ್ದು, ಮತದಾನಕ್ಕೆ ಕೇವಲ ಇನ್ನೊಂದು ವಾರ ಬಾಕಿಯಿರುವ ಹಿನ್ನೆಲೆಯಲ್ಲಿ ಪ್ರಚಾರ ಕಾರ್ಯ ತಾರಕಕ್ಕೇರಿದೆ. ಮತದಾರರ ಮನಗೆಲ್ಲಲು ಎಲ್ಲ ಪ್ರಮುಖ ರಾಜಕೀಯ ಪಕ್ಷಗಳು ಸಭೆ, ರ್‍ಯಾಲಿ, ರೋಡ್ ಶೋಗಳಲ್ಲಿ ತೊಡಗಿವೆ. ಪ್ರಧಾನಿ ಮತ್ತು ಬಿಜೆಪಿ ಹಿರಿಯ ನಾಯಕ ನರೇಂದ್ರ ಮೋದಿ ಅವರು, ಶನಿವಾರ ತಿರುವನಂತಪುರಂ ಹಾಗೂ ತಿರುವಲ್ಲಾದಲ್ಲಿ ಚುನಾವಣಾ ಪ್ರಚಾರ ಕಾರ್ಯವನ್ನು ನಡೆಸಲಿದ್ದಾರೆ. ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ಇಂದು ತಿರುವನಂತಪುರಂ ಹಾಗೂ ಕೊಲ್ಲಂನಲ್ಲಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿ ಯುಡಿಎಫ್ ಅಭ್ಯರ್ಥಿಗಳ ಪರ ಮತಯಾಚನೆ ಮಾಡಲಿದ್ದಾರೆ. ಎಲ್‌ಡಿಎಫ್ ಪರವಾಗಿ ಸಿಪಿಐ

ರಾಷ್ಟ್ರೀಯ ಕಾರ್ಯದರ್ಶಿ ಡಿ.ರಾಜಾ ನಿನ್ನೆ ಇಡುಕ್ಕಿಯಲ್ಲಿ ಚುನಾವಣಾ ಪ್ರಚಾರ ನಡೆಸಿದರು. ಮತದಾನದ ದಿನ ಹತ್ತಿರವಾಗ ತೊಡಗಿರುವಂತೆಯೇ ರಾಜಕೀಯ ನಾಯಕರು ಅಬ್ಬರದ ಪ್ರಚಾರದಲ್ಲಿ ತೊಡಗಿದ್ದಾರೆ.

******

ಕೊಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ನಡೆಯಲಿರುವ ಐಪಿಎಲ್ ಟಿ-೨೦ ಪಂದ್ಯಾವಳಿಯಲ್ಲಿ ಇಂದು ಕೊಲ್ಕತ್ತಾ ನೈಟ್ ರೈಡರ್ಸ್ ಮತ್ತು ಸನ್ ರೈಸರ್ಸ್ ಹೈದರಾಬಾದ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ. ಕಳೆದ ರಾತ್ರಿ ನಡೆದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಲಖನೌ ಸೂಪರ್ ಜೈಂಟ್ಸ್ ವಿರುದ್ಧ ೬ ವಿಕೆಟ್‌ಗಳ ಗೆಲುವು ಸಾಧಿಸಿದೆ.

***END***